**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸ್ಿ.ಸಿ ನಂಃ 713/ 2018**

| | | |
|---|---|---|
| ಸಾಕ್ಷಿಯ ಹೆಸರುಃ | ಈರಮ್ಮ | ಪ್ರಾಸಾಃ 01 |
| ತಂದೆಯ ಹೆಸರುಃ | ನಿಂಗಪ್ಪ | ಚಾಸಾಃ 01 |
| ವಯಸ್ಸುಃ | 55 ವರ್ಷ | ದಿಃ 22-09-2023 |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಸಾವೂರು | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನನಗೆ ಚಾಸಾಃ 4 ಮತ್ತು 5 ರವರು ಪರಿಚಯ ಇದೆ, ಅವರು ನನಗೆ ಮಕ್ಕಳಾಗಬೇಕು. ಚಾಸಾಃ 6 ಮತ್ತು 7 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ಸುಮಾರು 6 ವರ್ಷದ ಹಿಂದೆ ನಮ್ಮ ಜಾಗದಲ್ಲಿ ದನಗಳು ಕಟ್ಟಲು ಗುಡಿಸಲು ಹಾಕಿರುತ್ತೇವೆ. ನಾನು ಗುಡಿಸಲಿನಲ್ಲಿ ದನಗಳ ಸಗಣಿ ತೆಗೆಯಲು ಹೋದಾಗ ಆರೋಪಿತರು ಎಲ್ಲರೂ ಬಂದು 1 ನೇ ಆರೋಪಿತನು ನನಗೆ ಕೂದಲು ಹಿಡಿದು ನೆಲಕ್ಕೆ ಹಾಕಿ ಹೊಡೆದನು, 3 ನೇ ಆರೋಪಿತನು ನನ್ನ ಸೀರೆ ಸೆರಗು ಹಿಡಿದು ಎಳೆದು ಅವಮಾನ ಮಾಡಿರುತ್ತಾನೆ, 2 ನೇ ಆರೋಪಿತನು ನನಗೆ ಸೂಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. 4 ಮತ್ತು 5 ನೇ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನನಗೆ ಆರೋಪಿತರು ಸಾಯಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ನನಗೆ ಹೊಡೆ-ಬಡೆ ಮಾಡಿರುತ್ತಾರೆ. ನಾನು ಅದೇ ದಿನ 4-00 ಗಂಟೆಗೆ ಪೊಲಿಸ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-1 ಎಂದು, ಗುರುತಿಸಲಾಯಿತು. ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುತ್ತಾರೆ. ಮರು ದಿನ ಪೊಲಿಸರು ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಗೆ ಪಂಚನಾಮೆ ಕಾಲದ ಫೋಟೋವನ್ನು ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

ಸದರಿ ಘಟನೆ ನಡೆದಾಗ ಮುಂಜಾನೆ 6-00 ಗಂಟೆ ಆಗಿರುತ್ತದೆ ಎಂದರೆ ಸರಿ. ಜಗಳವನ್ನು ಚಾಸಾಃ 4 ಮತ್ತು 5 ರವರು ಬಂದು ಬಿಡಿಸಿರುತ್ತಾರೆ ಎಂದರೆ ಸರಿ.

**ಪಾಟಿ ಸವಾಲು ಃಆರೋಪಿತರ ಪರ ಶ್ರೀ. ಜಿ. ಬಿ. ಆರ್. ವಕೀಲರಿಂದ**

**1.** ಗುಡಿಸಲು ಯಾವ ಜಮೀನು ಸರ್ವೆ ನಂಬರಲ್ಲಿ ಇರುತ್ತದೆ ಎಂದು ಹೇಳಲು ನನಗೆ ಬರುವುದಿಲ್ಲ. ಮನೆ ಪಂಚಾಯಿತಿಯ ನಂಬರ ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆ ಜಾಗವನ್ನು ಖರೀದಿ ಮಾಡಿಕೊಂಡಿರುತ್ತಾನೆ. ಸದರಿ ಜಾಗದ ಬಗ್ಗೆ ನೊಂದಾಯಿತ ಪತ್ರಗಳು ಇವೆ. ಅದನ್ನು ಅಯ್ಯಾಳಪ್ಪ ಇವರ ಕಡೆಯಿಂದ ಖರೀದಿ ಮಾಡಿರುತ್ತಾರೆ. ನಾನು ಅಯ್ಯಾಳಪ್ಪ ಇವರ ಹೆಸರಿನಲ್ಲಿ ಕಾಗದ ಪತ್ರವನ್ನು ನಾನು ನೋಡಿರುವುದಿಲ್ಲ.

2. ದಿನಾಂಕಃ 22-09-2018 ರಂದು ಮುಂಜಾನೆ 6-00 ಗಂಟೆಗೆ ಜಗಳವಾಗಿದ್ದನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಾಗವು ಯಲ್ಲಮ್ಮ ತಂದೆ ಆಶಪ್ಪ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನು ಸರ್ವೆ ನಂಬರ 333 ಸಾವೂರು ಗ್ರಾಮಕ್ಕೆ ಹತ್ತಿಕೊಂಡು ಇದೆ ಎಂದರೆ ಸರಿ. ಸದರಿ ಜಾಗವು ಯಲ್ಲಮ್ಮ ಇವರಿಗೆ ಸಂಬಂಧಪಟ್ಟಿದು ಇರುತ್ತದೆ ಎಂದರೆ ಸರಿ. ಸದರಿ ಯಲ್ಲಮ್ಮ ಇವರ ಜಾಗದಲ್ಲಿ ನಾವು ಗುಡಿಸಲು ಹಾಕಲು ಹೋಗಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಗುಡಿಸಲು ಹಾಕುವಾಗ ಯಾರೂ ತಕರಾರು ಮಾಡಿಲ್ಲ. ಆರೋಪಿತರು ಗುಡಿಸಲನ್ನು ತೆಗೆದು ಒಗೆದಿರುತ್ತಾರೆ. ಆರೋಪಿತರು ಗುಡಿಸಲನ್ನು ತೆಗೆದಿರುವುದಿಲ್ಲ. ನಾವು ಹಾಕಲು ಹೋದಾಗ ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ಕಬಳಿಸುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆಃ 216/2018 ಸಲ್ಲಿಸಿರುತ್ತೇನೆ ಎಂದರೆ ಸರಿ. ಅಸಲು ದಾವೆ ಚಾಲತಿಯಲ್ಲಿರುವಾಗ ಜಾಗವನ್ನು ಕಬಳಿಸುವ ಉದ್ದೇಶದಿಂದ ಈ ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಿವಿಲ್ ದಾವಾ ವಿಲೆವಾರಿಗೆ ಬಾಕಿ ಇದೆ ಇದೆ ಎಂದರೆ ಸರಿ. 3 ನೇ ಆರೋಪಿತನು ನನಗೆ ಮಾನಭಂಗ ಮಾಡಲು ಪ್ರಯತ್ನ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಆರೋಪಿತನು ಸೂಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾಃ 4 ಮತ್ತು 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಫೋಟೋ ಕಟ್ಟಿಗೆಯನ್ನು ತಂದು ಗುಡಿಸಲು ಹಾಕಲು ತಂದಿರುವ ಕಟ್ಟಿಗೆಯಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**